1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 1504 /2023 ಚಾಸಾಃ(4) ಪ್ರಾಸಾ (3 )

ದಿನಾಂಕಃ **24-03-2026** ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಹನಮಂತವ್ವ |
| ಗಂಡನ ಹೆಸರು | ಮೂಕಪ್ಪ ತಳವಾರ |
| ವಯಸ್ಸು | 34 ವರ್ಷ, |
| ಉದ್ಯೋಗ | ಹೊಲಮನಿಕೆಲಸ |
| ವಾಸಸ್ಥಳ | ಚುಕ್ಕನಕಲ್ಲ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ಮೃತ ರಂಜಿತ ಚಾಸಾ-1 ಮತ್ತ ಚಾಸಾ-3 ಹಾಗೂ 5 ರವರ ಪರಿಯವಿದೆ. ಆರೋಪಿಯ ಪರಿಚಯ ನನಗೆ ಇರುವುದಿಲ್ಲ. ಮೃತ ರಂಜಿತ ಹೇಗೆ ಮೃತ ಹೊಂದಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಮತ್ತು ನಾನು ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 19-3-2023 ರಂದು ನಾನು, ಚಾಸಾ-5 ಮತ್ತು ಮೃತ ರಂಜಿತ ಬೆಳಿಗ್ಗೆ 10 ಗಂಟೆಗೆ ಜಮಿನಿನ ಕೆಲಸಕ್ಕೆ ಹೋಗಿದ್ದೆವು, ಸಾಯಂಕಾಲ 5-30 ಕ್ಕೆ ನಾನು ಮತ್ತು ಚಾಸಾ-3 ಮತ್ತು ಮೃತ ರಂಜಿತ ಮೂವರು ಸೇರಿಕೊಂಡು ಕೊಪ್ಪಳದಿಂದ ಮುದ್ದಾಬಳ್ಳಿಗೆ ಹೋಗುವ ರಸ್ತೆಯಲ್ಲಿ ಅಟೋ ಕಾಯುತ್ತಾ ನಿಂತಿದ್ದಾಗ ಆಗ ಕೆಎ-37/ಬಿ-5274 ಪಾಸೆಂಜರ ಅಟೋದಲ್ಲಿ ನಾವು 3 ಜನ ಹತ್ತಿಕೊಂಡು ಸ್ವಲ್ಪ ದೂರ ಬಂದಾಗ ಆರೋಪಿ ಸದರಿ ಅಟೋವನ್ನು ಅತೀವೇಗ ಮತ್ತ ಅಜಾಗರೂಕತೆಯಿಂದ ತಗ್ಗುದಿಣ್ಣೆ ನೋಡದೇ ಚಲಾಯಿಸಿದ್ದರಿಂದ ನಿಧಾನವಾಗಿ ಚಲಾಯಿಸಿ ಎಂದು ಹೇಳಿದರೂ ಕೇಳದೇ ಅತೀವೇಗವಾಗಿ ಅಟೋವನ್ನು ಚಲಾಯಿಸಿದ್ದು ಮೃತ ಮೃತ ರಂಜಿತ ಆಯತಪ್ಪಿ ಪುಟಿದ್ದು ಕೆಳಗೆ ಬಿದ್ದಿದ್ದು ಅದನ್ನು ನಾನುಪ್ರತ್ಯಕ್ಷ ನೋಡಿದ್ದು ಚಾಸಾ-3 ರವರು ಈ ಸಂಬಂದ ಚಾಸಾ-1 ರವರಿಗೆ ಕರೆ ಮಾಡಿ ತಿಳಿಸಿದ್ದು ಚಾಸಾ-1 ರವರು ಸ್ಥಳಕ್ಕೆ ಬಂದರು ಅಂದರೆ ಸರಿಯಲ್ಲ. ಈ ಸಂಬಂದ ನಾನು ಹೇಳಿಕೆಯನ್ನುನೀಡಿದ್ದೆನೆಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯುನ್ನು ನಿಪಿ-6

ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗಳಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ಎನೂ ಇಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.